ಪರಿಹಾರ ಕೇಳುವ ತವಕವಿದ್ದರೂ ಪರಿಸ್ಥಿತಿ ಸೂಕ್ಷ್ಮವಾಗಿತ್ತು. ಮಗಳು ಸುಖವಾಗಿರುವಳೆಂಬ ಸಮಾಧಾನದಲ್ಲಿದ್ದ ಮುಪ್ಪಿನ ತಾಯಿಯ ಬಳಿ ಹೇಳಲು ಬಾಯಿ ಬರಲಿಲ್ಲ. ದ್ವಂದ್ವದಲ್ಲಿ ತೊಳಲಾಡಿ ಮೌನವಾದಳು ಸುಜಾತ.

ಮರುದಿನ, “ಕಾಕಾನ ಮನಿಗೆ ಹೋಗಿ ಬಾ ಸುಜಿ. ಮಲಕೊಂಡು ಬಿಟ್ಟಾನ. ಕ್ಯಾನ್ಸರ್ ಅಂತ... ಅದೇನೋ ಕೀಮೋಥೆರಪಿ ಅಂತಲಾ. ಭಾಳ ಹಣ್ಣ ಆಗ್ಯಾನ. ಇನ್ನೆಷ್ಟು ದಿವ್ಸ ಇರ್ತಾನೋ ಗೊತ್ತಿಲ್ಲ” ಎಂದರು ಲಕ್ಷ್ಮೀಬಾಯಿ. ಸುಜಾತ ಅಣ್ಣನೊಂದಿಗೆ ಕೈಯಲ್ಲಿ ಹಣ್ಣಿನ ಚೀಲ ಹಿಡಿದು ಹೋದಳು. ಒಂದು ಕಾಲದಲ್ಲಿ ದಷ್ಟಪುಷ್ಟವಾಗಿ ಜಟ್ಟಿ ಪೈಲ್ವಾನನಾಗಿದ್ದ ಚಿಕ್ಕಪ್ಪ ಹಂಚೀಕಡ್ಡಿಯಾಗಿದ್ದ. “ಹೆಂಗಿದ್ದೀ ಕಾಕಾ?” ಎಂದೊಡನೆ, “ಆರಾಮಿದ್ದೇನವಾ... ಆರಾಮಾಗ್ತದ ಅಂತ ಡಾಕ್ಟರು ಹೇಳ್ಯಾರ. ವಯಸ್ಸಾಗೇದ ಬಿಡು. ಈಗ ನೀವೆಲ್ಲಾ ಆರಾಮ ಇರೋದು ಮುಖ್ಯ. ನೋಡಿ ಸಂತೋಷ ಪಡತೇವಿ. ಯಾವಾಗ ಮಗಳ ಮದವಿ ಮಾಡ್ತೀ? ನಿಮ್ಮಪ್ಪನ ಸ್ಥಾನದಾಗಿದ್ದೇನಿ ನಾನು. ಬಂದು ಆಶೀರ್ವಾದ ಮಾಡಿ ಹೋಗಾಂವಾ” ಎಂದು ಬಾಯ್ತುಂಬ ನಕ್ಕ. ಹಳೆಯ ವಿಷಯಗಳನ್ನೆಲ್ಲ ಹೇಳುತ್ತ ಎಲ್ಲರನ್ನೂ ನಗಿಸಿದ. ಜೋಳದ ರೊಟ್ಟಿ, ಚಟ್ನಿ, ಬದನೆಕಾಯಿ ಪಲ್ಯದ ಊಟವಾಯಿತು. ತಿರುಗಿ ಬರುವಾಗ ಸೊಸೆಯ ಕೈಯಲ್ಲಿ ಕುಂಕುಮ, ರವಿಕೆ ಖಣ ಕೊಡಿಸುತ್ತ, “ನಿನ ಮಗಳ ಮದವಿಗೆ ಲಗೂನ ಕರಸು. ಆಗ ನಾ ಸೂಟ್ ಹಾಕ್ಕೊಂಡು ಬರಾಂವಾ” ಎನ್ನುತ್ತ ಕೈಬೀಸಿದ್ದ. ಅವಳ ಕಣ್ಣುಗಳು ತುಂಬಿ ಬಂದಿದ್ದವು. ಅದೆಷ್ಟು ಜೀವನೋತ್ಸಾಹ... ಡಾಕ್ಟರ್ ಕೈಚೆಲ್ಲಿದ್ದಾರಂತೆ. ಆದರೆ ಅಂವ ನಗುತ್ತಲೇ ಇದ್ದ.

ಅಂದೇ ಅವಳ ಸೋದರಮಾವನ ಫೋನ್ ಬಂದಿತ್ತು. “ಬಿಜಾಪುರಕ್ಕ ಬಂದೀಯಂತ. ಹುಬ್ಬಳ್ಳಿಗೆರೆಡು ದಿವ್ಸ ಬಂದು ಹೋಗು. ನೋಡಿ ಭಾಳ ದಿವ್ಸಾದು” ಎಂದು ಒತ್ತಾಯಿಸಿದ. ವೃಂದಾ, “ಹ್ಞೂಂ... ಕುಳ್ಳು ವಗದಾಗೇದ ನಿಮ್ಮ ಕಾಕಾಗ ಮತ್ತ ಮಾಮಾಗ. ನಾಳೆನ ಹೋಗಿ ನೋಡಕೊಂಡು ಎರಡ ದಿವ್ಸಿದ್ದು ಹೋಗ್ರಿ ಬೆಂಗಳೂರಿಗೆ. ಇಲ್ಲಂದ್ರ ಕೇಳಕೋತ ಕೂಡತಾರ” ಎಂದಳು. ಸುಜಾತಳ ತವರುಮನೆ ಮೂರೇ ದಿನಕ್ಕೆ ಮುಗಿದಿತ್ತು. ಲಕ್ಷ್ಮೀಬಾಯಿ ದುಃಖ ನುಂಗಿಕೊಂಡು, “ಹೌದು ಸುಜಿ, ಮಾಮಾ ಭಾಳ ಹೈರಾಣಾಗಿ ಹಾಸಿಗಿ ಹಿಡದಾನ. ಎಲ್ಲಾ ಮಲಕೊಂಡಲ್ಲೇ ಅಂತ... ಭೆಟ್ಯಾಗಿ ಹೋಗು” ಎಂದರು. ಅದರಂತೆಯೇ ಅವಳಣ್ಣ ಅವಳನ್ನು ಹುಬ್ಬಳ್ಳಿ ಮುಟ್ಟಿಸಿದ. ದಾರಿಯಲ್ಲಿ, “ಸುಜಿ... ಹಿಂಗ ಹೇಳ್ತೇನಂತ ತಪ್ಪು ತಿಳಕೋಬ್ಯಾಡಾ. ನಮ್ಮನಿ ಪರಿಸ್ಥಿತಿ ನೀನ ನೋಡೀದಿ. ನಿಮ್ಮ ವೈನಿ ಎಷ್ಟ ಸ್ಟ್ರಾಂಗ್ ಇದ್ದಾಳಂತ ಗೊತ್ತಾತಿಲ್ಲೋ... ಅವ್ವನ್ನ ನೋಡಕೊಳ್ಳೋದ ರಗಡಾಗೇದ. ನಿನಗೇನೋ ಮನಸ್ಸಿಗೆ ಆರಾಮಿಲ್ಲ. ಕನಸು ಬೀಳ್ತಾವ... ಹೈರಾಣಾಗೀದಿ ಅಂತ ಕೇಳಿದ್ದೆ. ಅದಕ್ಕೆಲ್ಲಾ ತಲಿ ಕೆಡಿಸಿಗೊಳ್ಳದನ ಆರಾಮ ಇರು. ಅವ್ವಗ ಏನೂ ಹೇಳ್ಲಿಕ್ಕೆ ಹೋಗಬ್ಯಾಡಾ. ನಿನಗ ಏನೂ ಮಾಡೋ ಸ್ಥಿತಿಯೊಳಗ ನಾವಿಲ್ಲ” ಎಂದು ಸ್ಪಷ್ಟವಾಗಿ ಹೇಳಿದ್ದ. “ಗೊತ್ತದಪಾ... ಛೊಲೊ ಗಂಡಗ ಮದವಿ ಮಾಡಿ ಕೊಟ್ಟೀರಿ ಸಾಕು. ನಾ ತವರಮನಿಯಿಂದ ಏನೂ ಬಯಸೂದುಲ್ಲಾ” ಎನ್ನುತ್ತ ದುಃಖ ನುಂಗಿ ನಕ್ಕಳು.

ನಿಜಕ್ಕೂ ಸೋದರಮಾವ ಶೋಚನೀಯ ಸ್ಥಿತಿಯಲ್ಲಿದ್ದರು. ಸೊಸೆ ಸ್ಮಿತಾ ತುಂಬಾ ಒಳ್ಳೆಯವಳು. ಒಬ್ಬ ಮೇಲ್ ನರ್ಸ್ ಇಟ್ಟುಕೊಂಡು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದಳು. ಒಂದಾನೊಂದು ಕಾಲದಲ್ಲಿ ಸುಜಾತಳನ್ನೇ ಸೊಸೆಯಾಗಿ ಮಾಡಿಕೊಳ್ಳಬೇಕೆಂಬ ತೀವ್ರ ಹಂಬಲವಿತ್ತು ಸೋದರಮಾವನಿಗೆ. ಮಗ ಗಿರೀಶನಿಗೂ ಸುಜಾತಳ ಮೇಲೆ ಪ್ರೀತಿ. ಲಕ್ಷ್ಮೀಬಾಯಿಗೂ ಇಷ್ಟವೇ. ಆದರೆ ಪಾಂಡುರಂಗರಾಯರು ಸುತಾರಾಂ ಒಪ್ಪಿರಲಿಲ್ಲ. “ಅಂವ ಗಿರೀಶ ಛೊಲೊ ಹುಡುಗ. ಪರಂತು ಸೈನ್ಯದಾಗಿದ್ದಾನ. ಬಂದಾಗ... ಹೋದಾಗ ಖರೆ. ಸಂಸಾರ ಬೊರೊಬ್ಬರಿ ಆಗೂದುಲ್ಲ. ಬ್ಯಾಡಾ” ಎಂದು ಕಡ್ಡಿ ತುಂಡು ಮಾಡಿದಂತೆ ಹೇಳಿ ಬೇರೆ ಸಂಬಂಧ ಹುಡುಕಿದ್ದರು. ಲಕ್ಷ್ಮಿಬಾಯಿಯ ಅಳು ಲೆಕ್ಕಿಸದೇ ಸಂಜಯನ